# ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪೊನ್ನಂಪೇಟೆ

**ಸಿ.ಸಿ. ನಂ. 1472/2023** **ಫ್ರಾ.ಸಾ –4**
**ಚಾ.ಸಾ – 5**

ದಿನಾಂಕಃ **06.11.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಸಾಕ್ಷಿಯ ಹೆಸರು | : | ಅರುಣಾ @ ಬೆಳ್ಳಿಯಪ್ಪ |
| ತಂದೆಯ ಹೆಸರು | : | ಲೇಟ್ ಸುಬ್ಬಯ್ಯ |
| ವಯಸ್ಸು | : | 61 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ ಸ್ಥಳ | : | ಬೆಕ್ಕೆಸೂಡಲೂರು ಗ್ರಾಮ |

ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-

ಸಾಕ್ಷಿಯ ಗುರುತಿನ ಚೀಟಿಯಲ್ಲಿ ಬೆಳ್ಳಿಯಪ್ಪ ಎಂದು ಇದ್ದು ಇವನ್ನು Ponnampet ಯ WPC No. 506 ರವರು ಇವರ ಹೆಸರು ಅರುಣಾ ಎಂದು ಕೂಡ ಇರುವುದು ಇವರೇ ಸಾಕ್ಷಿದಾರರು ಎಂದು ಗುರುತಿಸದ ಮೇರೆಗೆ ಸಾಕ್ಷ್ಯವನ್ನು ತೆಗೆದುಕೊಳ್ಳಲಾಯಿತು. ಸಾಕ್ಷಿ ನಿ.ಪಿ.2 ದಾಖಲೆಯಲ್ಲಿ ಸಹಿ ನೋಡಿ ಗುರುತಿಸಿದ್ದು ಅದನ್ನು ನಿ. ಪಿ. 2(ಸಿ)ಎಂದು ಗುರುತಿಸಲಾಯಿತು. ನಿ. ಪಿ. 3 ಮತ್ತು 4 ಫೋಟೋವನ್ನು ನೋಡಿ ಗುರುತಿಸಿರುತ್ತಾರೆ. ಆರೋಪಿಯ ಅಂಗಡಿಯಲ್ಲಿ ಈ ಫೋಟೋವನ್ನು ತೆಗೆದಿರುತ್ತಾರೆ, ಯಾವ ವಿಚಾರಕ್ಕೆಂದು ಗೊತ್ತಿಲ್ಲ. ಈ ಬಗ್ಗೆ ಪೊಲೀಸರಿಗೆ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ತನ್ನ ಹೇಳಿಕೆಗೆ ಭಾಗಶಃ ಪ್ರತಿಕೂಲವಾಗಿ ಸಾಕ್ಷ್ಯ ನುಡಿಯುತ್ತಿರುವುದರಿಂದ, ಮಾನ್ಯ ಎಪಿಪಿರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ನೀಡಲಾಯಿತು)

<u>ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-</u>

ದಿ. 05.09.2023 ರಂದು ನಾನು ಮತ್ತು ಚಾಸಾ 6 ರವರು ಪೊನ್ನಂಪೇಟೆ ಬಸವೇಶ್ವರ ದೇವಸ್ಥಾನದ ಬಳಿ ನಿಂತು ಮಾತನಾಡುತ್ತಿದ್ದೆವು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಪೊನ್ನಂಪೇಟೆ ಪೊಲೀಸರು ದಾಳಿ ಮಹಜರ್‌ಗೆ ಸಹಕರಿಸಲು ಕೋರಿದರು,ಅದಕ್ಕೆ ನಾವು ಒಪ್ಪಿ ದೆವು ಎಂದರೆ ಸರಿಯಲ್ಲ. ನಂತರ ನಾನು ಮತ್ತು ಪೊಲೀಸರು 08.00 ಗಂಟೆಗೆ ಬೆಕ್ಕೆಸೊಡ್ಲೂರು ಗ್ರಾಮದ ಆರೋಪಿ ಅಂಗಡಿ ಬಳಿ ತಲುಪಿದೆವು ಎಂದರೆ ಸರಿಯಲ್ಲ. ಆಗ 2 – 3 ಜನರು ಆರೋಪಿ ಬಳಿ ಮಧ್ಯ ಪಡೆಯುತ್ತಿದ್ದರು ನಮ್ಮನ್ನು ನೋಡಿ ಅವರು ಓಡಿ ಹೋದರು ಎಂದರೆ ಸರಿಯಲ್ಲ. ಆಗ ಅಂಗಡಿಯಲ್ಲಿದ್ದ ವ್ಯಕ್ತಿ ಮಧ್ಯದ ಪ್ಯಾಕೆಟ್‌ಗಳನ್ನು ಪ್ಲಾಸ್ಟಿಕ್ ಚೀಲದಲ್ಲಿ ಇಟ್ಟುಕೊಂಡಿದ್ದರು ಎಂದರೆ ಸರಿಯಲ್ಲ. ಇದರ ಬಗ್ಗೆ ಪೊಲೀಸರು ಪರವಾನಗಿ ಕೇಳಿದಾಗ ಇಲ್ಲ ಎಂದು ತಿಳಿಸಿದರು ಎಂದರೆ ಸರಿಯಲ್ಲ.

90 M. L. ನ 31Amurth silver cup rare Indian brandy ಅನ್ನು ಅಕ್ರಮವಾಗಿ ಶೇಖರಣೆ ಮಾಡಿ ಇಟ್ಟುಕೊಂಡಿದ್ದರು ಎಂದರೆ ಸರಿಯಲ್ಲ.. ಸಾಕ್ಷಿಗೆ ನಿ. ಪಿ. 3 ಮತ್ತು 4 ಫೋಟೋದಲ್ಲಿ ಮಧ್ಯ ಕಾಣಿಸುತ್ತಿರುವುದು ತೋರಿಸಿದ್ದು ಅದು ನನಗೆ ಆ ದಿನ ಕಂಡಿಲ್ಲ ಎಂದು ಹೇಳುತ್ತಾರೆ. ಅದನ್ನು ಪೊಲೀಸರು ವಶಪಡಿಸಿಕೊಂಡರು ಎಂದರೆ ಸರಿಯಲ್ಲ. ಮು. ಮಾ 1 ಮತ್ತು 2 ಅನ್ನು ನೋಡಿ ಗುರುತಿಸಿರುವುದಿಲ್ಲ. ರೂ. 250/- ಹಣವನ್ನು ನೋಡಿ ಗುರುತಿಸಿರುವುದಿಲ್ಲ. ರಾತ್ರಿ 08.00 ರಿಂದ 09.00 ಗಂಟೆ ತನಕ ಮಹಜರ್ ಕ್ರಮ ಜರುಗಿಸಿದರು , ನನ್ನ ಸಹಿ ಪಡೆದರು ಎಂದರೆ ಸರಿಯಲ್ಲ. ಈ ಬಗ್ಗೆ ಪೊಲೀಸರು ನನ್ನ ವಿಚಾರಣೆ ಮಾಡಿ ನನ್ನ ಹೇಳಿಕೆ ಪಡೆದುಕೊಂಡರು ಎಂದರೆ ಸರಿಯಲ್ಲ.

ಮೇಲೆ ಹೇಳಿದಂತೆ ಪೊಲೀಸರಿಗೆ ಹೇಳಿಕೆ ಕೊಟ್ಟಿದ್ದು ಆ ಹೇಳಿಕೆ ಭಾಗವನ್ನು ಓದಿ ಹೇಳಿದ್ದು, ಅದನ್ನು ಅಲ್ಲಗೆಳೆದ ಕಾರಣ ಅದನ್ನು ನಿ. ಪಿ. 11 ಎಂದು ಗುರುತಿಸಲಾಯಿತು. ಆರೋಪಿ ನಮ್ಮ ಊರಿನವರು ಅವರು ಮನೆ ದಾರಿಯಲ್ಲಿದ್ದ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ.ಎಸ್.ಡಿ. ಕೆ. ವಕೀಲರಿಂದಃ</u> ಪೊಲೀಸ್ ಠಾಣೆಯಲ್ಲಿ ನನ್ನ ಜೊತೆ ನಿ ಪಿ 2 ಕ್ಕೆ ಯಾರು ಸಹಿ ಮಾಡಿದರು ನನಗೆ ಗೊತ್ತಿಲ್ಲ. ಆರೋಪಿಯ ವಶದಿಂದ ಏನು ವಶಪಡಿಸಿಕೊಂಡರು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಮು. ಮಾ 1 ಮತ್ತು 2 ವಶಪಡಿಸಿಕೊಂಡ ಬಗ್ಗೆ ನನಗೆ ಗೊತ್ತಿಲ್ಲ ಎಂದರೆ ಸರಿ.

<u>ಮರು ವಿಚಾರಣೆಃ ಇಲ್ಲ.</u>

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)**

sd/-
ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಪೊನ್ನಂಪೇಟೆ